ದಿನಾಂಕ 12.02.2024 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

ಪಾಟಿ ಸವಾಲು **3** ಮತ್ತು **5** ನೇ ಪ್ರತಿವಾದಿ ಪರ ಶ್ರೀ ಎನ್ ಡಿ ವಕೀಲರಿಂದಃ-

ವಾದಿ ನನ್ನ ಪತ್ನಿ. ನನ್ನ ಮದುವೆ ಆಗಿ 35 ವರ್ಷಗಳ ಮೇಲೆ ಆಗಿರುತ್ತದೆ. ನಾನು ವ್ಯವಸಾಯ ಮಾಡುತ್ತೇನೆ, ಮೂಲತಃ ನೆಲ್ಲಿಕೊಪ್ಪ ಗ್ರಾಮದವನು.ನನಗೆ ಮತ್ತು ನನ್ನ ಅಣ್ಣ-ತಮ್ಮಂದಿರಿಗೆ ಸೇರಿ ಒಟ್ಟು 3 ಎಕರೆ ಜಮೀನು ಇರುತ್ತದೆ. ವಾದಿಯ ತಂದೆ-ತಾಯಿಗೆ 5 ಜನ ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು ಇರುತ್ತಾರೆ. ವಾದಿಯ ತಂದೆ ಈಶ್ವರಪ್ಪ ಇವರಿಗೆ ಅಣ್ಣ-ತಮ್ಮಂದಿರು ಇರುವುದಿಲ್ಲ. ಈಶ್ವರಪ್ಪನ ತಂದೆಯ ಹೆಸರು ಗೊತ್ತಿಲ್ಲ. ಈಶ್ವರಪ್ಪನವರು ಮೂಲತಃ ಶಿಕಾರಿಪುರ ತಾಲ್ಲೂಕು ಶಿಡ್ಡಿಹಳ್ಳಿಯವರು. ವಾದಪತ್ರಕ್ಕೆ ವಾದಿಯೇ ಮಾಹಿತಿ ಕೊಟ್ಟಿರುತ್ತಾರೆ. ದಾವಾ ಸ್ವತ್ತುಗಳು ಮೂಲತಃ ವಾದಿಯ ತಂದೆಯ ತಂದೆಯಿಂದ ಬಂದಿರುತ್ತದೆ. ಫಹಣಿಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ಬೇರೆ ಯಾವುದೇ ದಾಖಲೆಗಳನ್ನು ನೋಡಿಲ್ಲ.

2. ದಾವಾ ಸ್ವತ್ತುಗಳು ವಾದಿಯ ಪಿತ್ರಾರ್ಜಿತ ಸ್ವತ್ತುಗಳು ಎಂದು ತೋರಿಸಲು ಯಾವುದೇ ದಾಖಲಾತಿಗಳು ಇರುವುದಿಲ್ಲ. ಸರ್ವೆ ನಂ. 1/1 ರ ವಿಸ್ತೀರ್ಣ 6 ಎಕರೆ 35 ಗುಂಟೆ. ಸದರಿ ಜಮೀನನ್ನು ನನ್ನ ಮಾವ ಈಶ್ವರಪ್ಪ, ಭಾವ ಮೃತ್ಯುಂಜಯಪ್ಪ ಮತ್ತು ಮಂಜಪ್ಪ ಸಾಗುವಳಿ ಮಾಡುತ್ತಿರುತ್ತಾರೆ. ನನ್ನ ಮಾವ ಸದರಿ ಜಮೀನನ್ನು ಖರೀದಿ ಮಾಡಿದ್ದೇನೆ ಎಂದು 1986-87 ರಲ್ಲಿ ನನಗೆ ತಿಳಿಸಿದ್ದರು. ವಾದಿಯಿಂದ ದಾವೆಯನ್ನು ಮಾಡಿಸುವುದರಹಿಂದೆ ನನ್ನ ಪ್ರಯತ್ನ ಹೆಚ್ಚಿದೆ ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನುನನ್ನ ಮಾವ ಖರೀದಿ ಮಾಡಿದ್ದಾರೆ ಎಂದು ತೋರಿಸಲು ದಾಖಲಾತಿ ಇರುತ್ತದೆ ಆದರೆ ಹಾಜರಪಡಿಸಿರುವುದಿಲ್ಲ.

3. ಸರ್ವೆ ನಂ. 1 /2 ರಲ್ಲಿ 5 ಎಕರೆ 25 ಗುಂಟೆ ಇರುತ್ತದೆ. ಸದರಿ ಜಮೀನನ್ನು ನನ್ನ ಮಾವ ಈಶ್ವರಪ್ಪ, ಭಾವ ಮೃತ್ಯುಂಜಯಪ್ಪ ಮತ್ತು ಮಂಜಪ್ಪ ಸಾಗುವಳಿ ಮಾಡುತ್ತಿರುತ್ತಾರೆ. ನನ್ನ ಮಾವ ಸದರಿ ಜಮೀನನ್ನು ಖರೀದಿ ಮಾಡಿದ್ದೇನೆ ಎಂದು ನನಗೆ ತಿಳಿಸಿದ್ದರು.ಖರೀದಿಗೆ ತೆಗೆದುಕೊಂಡ ಬಗ್ಗೆ ನನ್ನ ಬಳಿ ದಾಖಲಾತಿ ಇರುವುದಿಲ್ಲ.

4. ಸರ್ವೆ ನಂ. 21/1 ರಲ್ಲಿ ಎರೆಡು ವಿಭಾಗವಾಗಿರುತ್ತದೆ. ಅದರಲ್ಲಿ 2 ಎಕರೆ ಚಿಲ್ಲರೆ ಜಮೀನನ್ನು ಮಂಜಪ್ಪ ಸಾಗುವಳಿ ಮಾಡುತ್ತಿದ್ದಾರೆ. 3 ಎಕರೆ ಜಮೀನನ್ನು ಮೃತ್ಯುಂಜಯಪ್ಪ ಸಾಗುವಳಿ ಮಾಡುತ್ತಿದ್ದಾರೆ. ಸರ್ವೆ ನಂ. 21/1 ರಲ್ಲಿನ ಜಮೀನನ್ನು 5 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾರೆ ಮತ್ತು ಅವರ ಹೆಸರಿನಲ್ಲಿಯೇ ಇರುತ್ತದೆ. ಸರ್ವೆ ನಂ. 23/1 ರಲ್ಲಿ 4 ಎಕರೆಗಿಂತ ಕಡಿಮೆ ಜಮೀನು ಇರುತ್ತದೆ ಮತ್ತು ಅದನ್ನು 3 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾರೆ.

5. ಈಶ್ವರಪ್ಪ ಇವರು 17-18 ವರ್ಷಗಳ ಹಿಂದೆ ನಿಧನ ಹೊಂದಿರುತ್ತಾರೆ. ಅವರ ಮರಣ ಪ್ರಮಾಣಪತ್ರವನ್ನು ಹಾಜರಪಡಿಸಿಲ್ಲ. 1995 ಕ್ಕಿಂತ ಮೊದಲೇ 3 ಮತ್ತು 5 ನೇ ಪ್ರತಿವಾದಿಯರು ಪ್ರತ್ಯೇಕವಾಗಿದ್ದರು ಎಂದರೆ ಸರಿಯಲ್ಲ. ಈಗ 6-7 ವರ್ಷಗಳಿಂದ ಅವರುಗಳು ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿದ್ದಾರೆ. ವಾದಿ ಅವರ ತಾಯಿ ಮನೆಗೆ ವರ್ಷಕ್ಕೆ 1-2 ಬಾರಿ ಬಂದು ಹೋಗುವುದು ಮಾಡುತ್ತಾರೆ. ಅವರು ಅಣ್ಣ-ತಮ್ಮಂದಿರ ಜೊತೆ ಚೆನ್ನಾಗಿದ್ದರು. ಈಗ ಎರೆಡು ವರ್ಷಗಳಿಂದ ವಾದಿ ಅವರ ಜೊತೆ ಚೆನ್ನಾಗಿಲ್ಲ. ಈಗ ನನ್ನ ಅತ್ತೆ ಮಲ್ಲಮ್ಮ 7 ನೇ ಪ್ರತಿವಾದಿಯ ಜೊತೆ ವಾಸವಿದ್ದಾರೆ. ಕೊರಟಗೇರಿಯಿಂದ ಶಿಡ್ಡಿಹಳ್ಳಿಗೆ 8 ಕಿ. ಮೀ. ಅಂತರವಿದೆ. ಮಲ್ಲಮ್ಮ ಅವರ ಗಂಡ ನಿಧನ ಹೊಂದಿದ ನಂತರ 7 ನೇ ಪ್ರತಿವಾದಿಯ ಜೊತೆ ವಾಸವಿದ್ದಾರೆ.

6. ವಾದಪತ್ರದಲ್ಲಿ ದಾವಾ ಸ್ವತ್ತು ಮೂಲತಃ ನಮ್ಮ ಕುಟುಂಬಕ್ಕೆ ಹೇಗೆ ಬಂದಿರುತ್ತದೆ ಎಂದು ನಮೂದಿಸಿಲ್ಲ ಎಂದರೆ ಗೊತ್ತಿಲ್ಲ. 2022 ರಲ್ಲಿ 3 ಮತ್ತು 5 ನೇ ಪ್ರತಿವಾದಿಯರು ದಾವಾ ಸ್ವತ್ತಿನ ಖಾತೆಯನ್ನು ಅವರ ಹೆಸರಿಗೆ ಈಗ 6 ವರ್ಷಗಳ ಹಿಂದೆ 3 ಮತ್ತು 5 ನೇ ಪ್ರತಿವಾದಿಯರು ನಮಗೆ ತಿಳಿಸದೇ ಹಿಸ್ಸೆ ಮಾಡಿಕೊಂಡಿರುತ್ತಾರೆ. ಸುಮಾರು 25 ವರ್ಷಗಳಿಂದೇ 3 ಮತ್ತು 5 ನೇ ಪ್ರತಿವಾದಿಯರು ಪ್ರತ್ಯೇಕವಾಗಿ ವಾಸವಿದ್ದಾರೆ ಮತ್ತು ಸಾಗುವಳಿಯನ್ನು ಸಹ ಪ್ರತ್ಯೇಕವಾಗಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

7. 6-7 ವರ್ಷಗಳ ಹಿಂದೆ ನಾನು ಮತ್ತು ಕೊಳಗಿ ರೇವಣಪ್ಪ 3 ಮತ್ತು 5 ನೇ ಪ್ರತಿವಾದಿಯರಿಗೆ ಹಿಸ್ಸೆ ಮಾಡಿಕೊಡಲು ಪತ್ರ ಬರೆದುಕೊಟ್ಟಿದ್ದೆವು. ಸದರಿ ಪತ್ರಕ್ಕೆ

ನಾನು ಸಹಿ ಮಾಡಿರುವುದಿಲ್ಲ. 20 ವರ್ಷಗಳ ಹಿಂದೆಯೇ 3 ಮತ್ತು 5 ನೇ ಪ್ರತಿವಾದಿಯರು ಹಿಸ್ಸೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ 6-7 ವರ್ಷಗಳ ಹಿಂದೆ ಹಿಸ್ಸೆ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ಮತ್ತು 5 ನೇ ಪ್ರತಿವಾದಿಯರು ಯಾವ ವರ್ಷ ಖಾತೆಯನ್ನು ತಮ್ಮ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದು ಗೊತ್ತಿಲ್ಲ. 2022 ರಲ್ಲಿ ನನಗೆ ತಿಳಿಯಿತು. ಕಳೆದ ವರ್ಷ ವಾದಿಯು ದಾವಾ ಸ್ವತ್ತಿನಲ್ಲಿ ಹಿಸ್ಸೆ ಕೇಳಿರುತ್ತಾರೆ. ಸದರಿ ಸಮಯದಲ್ಲಿ ನನ್ನ ಪತ್ನಿ ಮಾತ್ರ ಇದ್ದರು. ಅವರ ಅಕ್ಕ-ತಂಗಿಯರು ಇರಲಿಲ್ಲ. ವಾದಿಯು ವಕೀಲರ ಮೂಲಕ ನೋಟಿಸ್ ಕೊಟ್ಟು ಹಿಸ್ಸೆ ಕೇಳಲು ನೀವು ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ಆ ರೀತಿ ನಾನು ತಿಳಿಸಿಲ್ಲ, ವಾದಿಯೇ ಅವರ ಮಗನ ಜೊತೆ ಹೋಗಿ ವಕೀಲರ ಮೂಲಕ ನೋಟಿಸ್ ಕೊಟ್ಟಿರುತ್ತಾರೆ ಎನ್ನುತ್ತಾರೆ.

8. ದಾವಾ ಹಾಕಲು ಹೋದಾಗ ವಾದಿಯು ದಾವಾ ಸ್ವತ್ತಿನ ಫಹಣಿಗಳನ್ನು ಪರಿಶೀಲನೆ ಮಾಡಿರುತ್ತಾರೆ. 3 ಮತ್ತು 5 ನೇ ಪ್ರತಿವಾದಿಯರು ನೋಂದಾಯಿತ ಹಿಸ್ಸಾ ಪತ್ರವನ್ನು ಮಾಡಿಕೊಂಡಿದ್ದಾರೋ ಇಲ್ಲವೋ ಎಂದು ವಾದಿ ಪರಿಶೀಲಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. 3 ಮತ್ತು 5 ನೇ ಪ್ರತಿವಾದಿಗಳ ಹೆಸರಿಗೆ ದಾವಾ ಸ್ವತ್ತಿನ ಖಾತೆ ಇರುವುದನ್ನು ವಾದಿಯು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ. ಪ್ರತಿವಾದಿಯರು ಕಳೆದ ವರ್ಷ ಖಾತೆ ಫಹಣಿ ಬದಲಾವಣೆ ಮಾಡಿಕೊಂಡು ಅದರ ಮೇಲೆ ತಲಾ 3 ಲಕ್ಷ ರೂ.ಗಳನ್ನು ಸಾಲ ತೆಗೆದುಕೊಂಡಿರುತ್ತಾರೆ. ಯಾವ ವರ್ಷ ದಲ್ಲಿ ಸಾಲ ತೆಗೆದುಕೊಂಡಿದ್ದಾರೆ ಎಂದು ಫಹಣಿಯಲ್ಲಿ ನಮೂದು ಇರುತ್ತದೆ ಎಂದರೆ ಸರಿ.

9. ದಾವಾ ಸ್ವತ್ತುಗಳನ್ನು ನೋಡಿರುತ್ತೇನೆ. ದಾವಾ ಸ್ವತ್ತಿನ ಸರ್ವೆ ನಂ. 1/1 ರ ಪೂರ್ವಕ್ಕೆ - ಕಾಡು ಇರುತ್ತದೆ, ಪಶ್ಚಿಮಕ್ಕೆ- 3 ಮತ್ತು 5 ನೇ ಪ್ರತಿವಾದಿಯರು ಜಮೀನು ಇರುತ್ತದೆ. ಉತ್ತರಕ್ಕೆ- ಪಿ ಡಬ್ಲೂಡಿ ರಸ್ತೆ, ದಕ್ಷಿಣಕ್ಕೆ- ಜಮೀನು ಇರುತ್ತದೆ ಅದು ಯಾರ ಜಮೀನು ಎಂದು ಗೊತ್ತಿಲ್ಲ.

10. ದಾವಾ ಸ್ವತ್ತಿನ ಸರ್ವೆ ನಂ. 1/2 ರ ಪೂರ್ವಕ್ಕೆ - ಕಾಡು ಇರುತ್ತದೆ, ಪಶ್ಚಿಮಕ್ಕೆ- ಪಿ ಡಬ್ಲೂಡಿ ರಸ್ತೆ ಇರುತ್ತದೆ. ಉತ್ತರಕ್ಕೆ- ರಸ್ತೆ ಇರುತ್ತದೆ, ದಕ್ಷಿಣಕ್ಕೆ- ಜಮೀನು ಇರುತ್ತದೆ ಅದು ಯಾರ ಜಮೀನು ಎಂದು ಗೊತ್ತಿಲ್ಲ.

11. ದಾವಾ ಸ್ವತ್ತಿನ ಸರ್ವೆ ನಂ. 21/1 ರ ಪೂರ್ವಕ್ಕೆ - ಜಮೀನು ಇರುತ್ತದೆ. ಅದು ಯಾರ ಜಮೀನು ಎಂದು ಗೊತ್ತಿಲ್ಲ. ಪಶ್ಚಿಮಕ್ಕೆ- ಗುಡ್ಡಪನ ಜಮೀನು ಇರುತ್ತದೆ. ಉತ್ತರಕ್ಕೆ- ಜಮೀನು ಇರುತ್ತದೆ. ಅದು ಯಾರ ಜಮೀನು ಎಂದು ಗೊತ್ತಿಲ್ಲ. ದಕ್ಷಿಣಕ್ಕೆ- ಬಂಡಿದಾರಿ ಇರುತ್ತದೆ

12. ದಾವಾ ಸ್ವತ್ತಿನ ಸರ್ವೆ ನಂ. 23/1 ರ ಪೂರ್ವಕ್ಕೆ - ಗುಡ್ಡಪನ ಜಮೀನು ಇರುತ್ತದೆ. ಪಶ್ಚಿಮಕ್ಕೆ- ಜಮೀನು ಇರುತ್ತದೆ. ಅದು ಯಾರ ಜಮೀನು ಎಂದು ಗೊತ್ತಿಲ್ಲ. ಉತ್ತರಕ್ಕೆ- ಬಂಡಿದಾರಿ. ದಕ್ಷಿಣಕ್ಕೆ- ಕೆರೆ ಇರುತ್ತದೆ. ಸದರಿ ಕೆರೆ ಹೆಸರು ಗೊತ್ತಿಲ್ಲ.

13. ಸದರಿ ನಾಲ್ಕೂ ಸ್ವತ್ತುಗಳ ಸರ್ವೆ ದಾಖಲಾತಿಗಳನ್ನು ನೋಡಿರುವುದಿಲ್ಲ. ನನ್ನ ಮಗ ಅಂಗವಿಕಲನಿರುತ್ತಾನೆ. ಆತನ ಆಸ್ಪತ್ರೆ ಖರ್ಚಿಗೆ ನಾನೇ ಖರ್ಚು ಮಾಡಿರುತ್ತೇನೆ. 3 ಹಾಗೂ 5 ನೇ ಪ್ರತಿವಾದಿಯಿಂದ ವಾದಿಯು ಯಾವುದೇ ಹಣ ಅಥವಾ ದಿನಸಿಯನ್ನು ತೆಗೆದುಕೊಂಡಿಲ್ಲ. 1994 ನೇ ಸಾಲಿನಿಂದಲೂ 3 ಹಾಗೂ 5 ನೇ ಪ್ರತಿವಾದಿಯರು ಪ್ರತ್ಯೇಕವಾಗಿ ವಾಸವಿದ್ದು, ಆಗ ಅವರ ಅಜ್ಜ ಸಿದ್ದಪ್ಪ ಜೀವಂತವಿದ್ದರು ಎಂದರೆ ಸರಿಯಲ್ಲ. ಸದರಿ ಸಿದ್ದಪ್ಪ 3 ನೇ ಪ್ರತಿವಾದಿಯನ್ನು ಪ್ರತ್ಯೇಕವಾಗಿ ಸಾಕಿ ತಮ್ಮ 3 ಎಕರೆ ಜಮೀನನ್ನು ಅವರಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಈಶ್ವರಪ್ಪನ ಮಕ್ಕಳಲ್ಲಿ 2 ನೇ ಪ್ರತಿವಾದಿ ಹಿರಿಯ ಮಗಳು. ಅದಾದನಂತರ ವಾದಿ ಜನಿಸಿರುತ್ತಾರೆ. ವಾದಿ ಮತ್ತು 2 ನೇ ಪ್ರತಿವಾದಿಯನ್ನು ಅವರ ತಂದೆ ಜೀವಂತವಿದ್ದಾಗಲೇ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ.

14. 6 ಮತ್ತು 7 ನೇ ಪ್ರತಿವಾದಿಯರ ಮದುವೆಯನ್ನು 3 ನೇ ಪ್ರತಿವಾದಿ ತಲಾ 5 ಲಕ್ಷ ರೂ. ಗಳನ್ನು ಖರ್ಚು ಮಾಡಿ ಮದುವೆ ಮಾಡಿರುತ್ತಾರೆ ಎಂದರೆ

ಸಾಕ್ಷಿಯು ಮದುವೆ ಮಾಡಿರುವುದು ನಿಜ ಅಷ್ಟು ಹಣ ಖರ್ಚು ಮಾಡಿರುವುದಿಲ್ಲ. ಸದರಿ ಸಮಯದಲ್ಲಿ ಈಶ್ವರಪ್ಪರವರ ಆರೋಗ್ಯ ಸ್ಥಿತಿ ಹದಗೆಟ್ಟಿರುತ್ತದೆ ಎಂದರೆ ಸರಿಯಲ್ಲ. ಸದರಿ ಮದುವೆ ಕಾಲಕ್ಕೆ 3 ಹಾಗೂ 5 ನೇ ಪ್ರತಿವಾದಿಯ ಸದರಿ ಹೆಣ್ಣು ಮಕ್ಕಳಿಗೆ ತಲಾ 5 ಲಕ್ಷ ರೂ. ಗಳನ್ನು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ 3 ಮತ್ತು 5 ನೇ ಪ್ರತಿವಾದಿಯರು ಅವರ ಸಹೋದರಿಯರಿಗೆ ಕೊಡಬೇಕಾಗಿದ್ದನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

15. 3 ನೇ ಪ್ರತಿವಾದಿಯ ಅವರ ತಂದೆ-ತಾಯಿ ಜೀವಂತವಿದ್ದಾಗಲೇ ಅವರ ಅಜ್ಜ ಸಿದ್ದಪ್ಪನ ಜೊತೆ ಪ್ರತ್ಯೇಕವಾಗಿದ್ದು, 50 ವರ್ಷಗಳಿಂದ ಅವರು ಪ್ರತ್ಯೇಕವಾಗಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಜಮೀನಿನಿಂದ ಬಂದ ಆದಾಯದಲ್ಲಿ ಅವರ ಸಹೋದರಿಯರಿಗೆ ಯಾವತ್ತೂ ಹಂಚಿಕೆಯಾಗಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಎಲ್ಲಿವೆ ಮತ್ತು ಹೇಗೆ ಬಂದಿರುತ್ತವೆ ಎಂದು ನನಗೆ ಮತ್ತು ವಾದಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ವಾದಿಯು ದಾವಾ ಸ್ವತ್ತಿನಲ್ಲಿ ಹಿಸ್ಸೆ ಕೇಳಲು ಅರ್ಹಳಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ. ಓ.ಹೇ.ಕೇ.ಸರಿಯಿದೆ.

(ತೆ.ನ್ಯಾಸಾ.ಹೇ.ಬೆ.ಮಾಡಲಾಯಿತು).

ಸಿ/ಸಿ ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.